# ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301

**DISTRICT URBAN DEVELPOMENT CELL, D.C. OFFICE UTTARA KANNADA DISTRICT,KARWAR,-581 301**

ದೂರವಾಣಿ : 08382 221170
Telephone: 08382 221170 (Fax)
Email:itstaffdudckarwar@gmail.com


ನಂ: ಡಿಯುಡಿಸಿ-1/ಬಾ.ವಾ/ಏವ- /2020-21 ದಿನಾಂಕ: 01-07-2020

## " ಅಲ್ಪಾವಧಿ ಟೆಂಡರ ಪ್ರಕಟಣೆ "

ಯೋಜನಾ ನಿರ್ದೇಶಕರು, ಕಾರ್ಯಪಾಲಕ ಅಭಿಯಂತರರು ಹಾಗೂ ಇಬ್ಬರು ಸಹಾಯಕ ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ ಉತ್ತರ ಕನ್ನಡ ಕಾರವಾರ ಇವರಿಗೆ ಕಚೇರಿ ಉಪಯೋಗಕ್ಕಾಗಿ ಒಂದು ವರ್ಷದ ಅವಧಿಗೆ ಮಾಹೆಯಾನ್ ಭಾಡಿಗೆ ಆಧಾರದ ಮೇಲೆ ಹವಾನಿಯಂತ್ರಿತ ವಾಹನಗಳನ್ನು ಮತ್ತು ಚಾಲಕರ ಸೇವೆ ಒದಗಿಸಲು ಆಸಕ್ತಿಯುಳ್ಳ ಜಿಎಸ್‌ಟಿ ನೊಂದಣಿ ಹೊಂದಿರುವ ವಾಹನದ ಮಾಲೀಕರಿಂದ ಪ್ರತ್ಯೇಕವಾಗಿ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳವರು ಈ ಕೆಳಕಂಡ ದಾಖಲೆ ಮತ್ತು ಶರತ್ತುಗಳಿಗೆ ಒಪ್ಪಿ, ದರಪಟ್ಟಿಗಳನ್ನು ದಿನಾಂಕ: 13-07-2020 ರಂದು ಸಂಜೆ 4.00 ಗಂಟೆಯೊಳಗಾಗಿ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕಾರವಾರ ಇವರ ವಿಳಾಸಕ್ಕೆ ಸೀಲ್ ಮಾಡಿದ ಲಕೋಟೆಯಲ್ಲಿ ಸಲ್ಲಿಸಬೇಕು. ಟೆಂಡರ ಫಾರಂ ಹಾಗೂ ಟೆಂಡರಗಳ ಶರತ್ತು ಮತ್ತು ಇತರೇ ಮಾಹಿತಿ ಬಗ್ಗೆ ದಾಖಲೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಚೇರಿ ಕಾರವಾರ ಇವರ ಕಚೇರಿಯಿಂದ ಪಡೆದುಕೊಳ್ಳತಕ್ಕದ್ದು. ಸಲ್ಲಿಸಿದ ದರವಾರನ್ನು ದಿನಾಂಕ: 13-07-2020 ರ ಸಂಜೆ 5.00 ಗಂಟೆಗೆ ತೆರೆಯಲಾಗುವುದು.

| ಅ. ನಂ. | ಟೆಂಡರ ನಂಬರ್ | ವಾಹನದ ಮಾದರಿ | ಇಎಂಡಿ ಮೊತ್ತ |
|---|---|---|---|
| 1 | ಡಿಯುಡಿಸಿ-1/ಯೋ.ನಿ/ ಬಾ.ವಾ (1)/ಏವ /2020-21 (ಯೋಜನಾ ನಿರ್ದೇಶಕರು) | (AC)Toyota Estios/Toyota Elantra/Swift Dezire/Mahidra Bolero/Maruti Ertiga | ರೂ. 10,000/- |
| 2 | ಡಿಯುಡಿಸಿ-1/ಕಾ.ಅ/ ಬಾ.ವಾ (2)/ಏವ /2020-21 (ಕಾರ್ಯಪಾಲಕ ಅಭಿಯಂತರರು) | (AC)Toyota Estios/Toyota Elantra/Swift Dezire/Mahidra Bolero/Maruti Ertiga | ರೂ. 10,000/- |
| 3 | ಡಿಯುಡಿಸಿ-1/ಸ.ಕಾ.ಅ-1/ ಬಾ.ವಾ (3)/ಏವ /2020-21 (ಸಹಾಯಕ ಕಾರ್ಯಪಾಲಕ ಅಭಿಯಂತರರು-1) | (AC)Toyota Estios/Toyota Elantra/Swift Dezire/Mahidra Bolero/Maruti Ertiga | ರೂ. 10,000/- |
| 4 | ಡಿಯುಡಿಸಿ-1/ಸ.ಕಾ.ಅ-2/ ಬಾ.ವಾ (4)/ಏವ /2020-21 (ಸಹಾಯಕ ಕಾರ್ಯಪಾಲಕ ಅಭಿಯಂತರರು-2) | (AC)Toyota Estios/Toyota Elantra/Swift Dezire/Mahidra Bolero/Maruti Ertiga | ರೂ. 10,000/- |

1. ಒದಗಿಸಬೇಕಾದ ದಾಖಲೆಗಳು :

1) ಇಎಂಡಿ ಮೊತ್ತ ರೂ. 10,000/- (ರೂಪಾಯಿ ಹತ್ತು ಸಾವಿರ ಮಾತ್ರ) ಗಳಿಗೆ ಕ್ರಾಸ್ ಮಾಡಿದ ಡಿಮಾಂಡ್ ಡ್ರಾಫ್ಟ್ ಅಥವಾ ಬ್ಯಾಂಕರ್ಸ್ ಚೆಕ್‌ನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಿಂದ "ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರವಾರ" ರವರ ಹೆಸರಿಗೆ ಪಡೆದು ಪಾವತಿಸುವಂತೆ ಕೋರಿದೆ.
2) ಪೂರೈಸುವ ವಾಹನದ ನೊಂದಣಿಯ ದಾಖಲೆಗಳು.
3) ವಾಹನವನ್ನು ಸರ್ಕಾರಿ ಕಚೇರಿಗಳಿಗೆ ಭಾಡಿಗೆ ಆಧಾರದಲ್ಲಿ ಪೂರೈಸಿದ ಬಗ್ಗೆ ದಾಖಲೆ ಪ್ರತಿ
4) ವಾಹನ ಚಾಲನೆಗೆ ಪರವಾನಿಗೆ ಹೊಂದಿದ ವಾಹನ ಚಾಲಕನ ವಿವರ.
5) ವಾಹನದ ಸಂಪೂರ್ಣ ಪಾರ್ಟಿಗೆ ವಿಮೆ ಮಾಡಿಸಿದ ದಾಖಲೆ.
6) ಟೆಂಡರ ನಂಬರವಾರು ಪ್ರತ್ಯೇಕ ದರವಾರು ಸಲ್ಲಿಸುವುದು.
7) 2016 ರ ನಂತರದ ವಾಹನದ ಮಾದರಿಯದ್ದಾಗಿರಬೇಕು.
8) ಜಿಎಸ್‌ಟಿ ನೊಂದಣಿ ದಾಖಲೆಗಳು

2. ಷರತ್ತುಗಳು :

1) ವಾಹನವು 2016 ನೇ ಸಾಲಿನ ಹಾಗೂ ತದನಂತರದ ಮಾದರಿಯದ್ದಾಗಿರಬೇಕು.
2) ದರವನ್ನು ಪ್ರತಿ ದಿನ 12.00 ಗಂಟೆಗೆ ಮತ್ತು ಪ್ರತಿ ಹೆಚ್ಚುವರಿ ಗಂಟೆಗೆ ನಮೂದಿಸಬೇಕು. ಹಾಗೂ ಜಿಎಸ್‌ಟಿ ಸೇರಿಸಿ ದರವನ್ನು ನಮೂದಿಸತಕ್ಕದ್ದು.
3) ಮಾಹೆಯಲ್ಲಿ ಕನಿಷ್ಠ 2500 ಕಿ.ಮೀ. ಚಲಿಸುವುದಕ್ಕೆ ಒಪ್ಪಿ ನಂತರದ ಪ್ರತಿ ಕಿ.ಮೀ. ಗೆ ದರವನ್ನು ಸೂಚಿಸಬೇಕು.
4) ವಾಹನದ ದುರಸ್ಥಿಗೆ ಬಂದಲ್ಲಿ ತಕ್ಷಣ ಬದಲಿ ವ್ಯವಸ್ಥೆ ಮಾಡಬೇಕು.
5) ಆಯ್ಕೆಯಾದ ಗುತ್ತಿಗೆದಾರರು ಚಾಲಕರಿಗೆ, ಸಮವಸ್ತ್ರ, ಗುರುತಿನ ಚೀಟಿ ಮತ್ತು ಮೊಬೈಲ್‌ನ್ನು ಕಡ್ಡಾಯವಾಗಿ ಒದಗಿಸುವುದು.
6) ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಕಾರವಾರ ಇವರು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಗೆ ಸಂಪರ್ಕಿಸಬಹುದು.
7) ಒಂದೇ ವಾಹನ ಒದಗಿಸಲು ಇಚ್ಛಿಸುವ ಮಾಲೀಕರು ರೂ. 10,000/- (ರೂ. ಹತ್ತು ಸಾವಿರ ಮಾತ್ರ) ಕ್ರಾಸ್ ಮಾಡಿದ ಡಿ.ಡಿ. ಯನ್ನು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಕಾರವಾರ ಇವರ ಹೆಸರಿನಲ್ಲಿ ಪಡೆದು ಪಾವತಿಸಲು ಕೋರಿದೆ.
8) ಅನುದಾನದ ಲಭ್ಯತೆ ಮೇರೆಗೆ ಬಿಲ್ಲನ್ನು ಪಾವತಿಸಲಾಗುವುದು.

ಅಪರ ಜಿಲ್ಲಾಧಿಕಾರಿಗಳು ಹಾಗೂ ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ
ಉತ್ತರ ಕನ್ನಡ, ಕಾರವಾರ

ಪ್ರತಿ:

1) ಕಚೇರಿಯ ನೋಟಿಸ್ ಬೋರ್ಡಿಗೆ.
2) ಜಿಲ್ಲಾಧಿಕಾರಿಗಳ ಕಾರ್ಯಾಲಯದ ಟೆಂಡರ ಬುಲೆಟಿನ್ ವಿಭಾಗಕ್ಕೆ ಟೆಂಡರ ಬುಲೆಟಿನಲ್ಲಿ ಪ್ರಕಟಿಸಲು ಕಳುಹಿಸಿದೆ.